ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 04-04-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಡಾ. ಬಾಬು ಜಗಜೀವನರಾಂ 109 ನೇಜನ್ಮ ದಿನಾಚರಣೆ ಅಂಗವಾಗಿ ಮಾಲಾರ್ಪಣೆ. | 05-04-2016<br>ಮಂಗಳವಾರ<br>ಬೆಳಗ್ಗೆ<br>10-00 ಗಂಟೆಗೆ | ವಿಧಾನಸೌಧ,<br>ಬೆಂಗಳೂರು |
| 2. | ಡಾ. ಬಾಬು ಜಗಜೀವನರಾಂ 109 ನೇಜನ್ಮ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ.<br>ಅಧ್ಯಕ್ಷತೆ:<br>ಹೆಚ್. ಆಂಜನೇಯ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. | 05-04-2016<br>ಮಂಗಳವಾರ<br>ಬೆಳಗ್ಗೆ<br>10-30 ಗಂಟೆಗೆ | ಔತಣ ಸಭಾಂಗಣ,<br>ನೆಲಮಹಡಿ, ವಿಧಾನಸೌಧ,<br>ಬೆಂಗಳೂರು |
| 3. | ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 18 ನೇ ವಾರ್ಷಿಕ ಘಟಿಕೋತ್ಸವ:<br>ಅಧ್ಯಕ್ಷತೆ:<br>ವಾಜುಭಾಯಿ ವಾಲಾ, ರಾಜ್ಯಪಾಲರು, ಕರ್ನಾಟಕ<br>ಉಪಸ್ಥಿತಿ:<br>ಡಾ. ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು, | 05-04-2016<br>ಮಂಗಳವಾರ<br>ಬೆಳಗ್ಗೆ<br>11-00 ಗಂಟೆಗೆ | ನಿಮ್ಹಾನ್ಸ್ ಕನ್ವ ನ್ಷನ್ ಸೆಂಟರ್,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಪ್ರವೇಶ ಪರೀಕ್ಷೆ : ಅಂಕ ಪ್ರಕಟ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

2016-17ನೇ ಸಾಲಿಗೆ ಕರ್ನಾಟಕ ವಸ್ತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ದಿನಾಂಕ :06-03-2016 ರಂದು ಜಿಲ್ಲಾವಾರು ಪ್ರವೇಶ ಪರೀಕ್ಷೆಯನ್ನು ಏಕಕಾಲದಲ್ಲಿ ನಡೆಸಲಾಗಿದ್ದು, ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ದಿನಾಂಕ 02-04-2016 ರಂದು ಸಂಘದ ವೆಬ್‌ಸೈಟ್ **www.kreis.kar.nic.in** ನಲ್ಲಿ ಮತ್ತು ಸಂಘದ ಎಲ್ಲಾ ವಸತಿ ಶಾಲೆಗಳಲ್ಲಿ ಪ್ರಕಟಿಸಲಾಗಿದೆ.

ಬಾಬು:ಜಿಪಿಆರ್

## ಉಚ್ಚ ನ್ಯಾಯಾಲಯದಲ್ಲಿ 29 ಲಾ ಕ್ಲರ್ಕ್, ರಿಸರ್ಚ್ ಅಸಿಸ್ಟೆಂಟ್ಸ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

ಪ್ರತಿಭಾವಂತ ಕಾನೂನು ಪದವೀಧರರಿಗೆ, ಕಾನೂನು ವೃತ್ತಿಗೆ ಸೇರ್ಪಡೆ, ಕಾನೂನು ತಕರಾರು ಅರ್ಜಿಗಳ ವಿವಿಧ ರೂಪಗಳು, ಕಾನೂನಿನ ವಿವಿಧ ಶಾಖೆಗಳು ಮತ್ತು ನ್ಯಾಯಾಲಯದ ಕಾರ್ಯವಿಧಾನಗಳ ಪರಿಚಯ ಮಾಡಿಕೊಡುವ ಸಲುವಾಗಿ ಹಾಗೂ ನವ ಕಾನೂನು ಪದವೀಧರರಿಗೆ ಉತ್ತೇಜನ ನೀಡುವ ಸಲುವಾಗಿ, ಕಾನೂನು ಪದವಿ (ಕನಿಷ್ಠ ಶೇ 50 ಅಂಕಗಳು) ಹೊಂದಿರುವಂತಹ ಆಸಕ್ತ ಅಭ್ಯರ್ಥಿಗಳಿಂದ 29 ಲಾ ಕ್ಲರ್ಕ್ ಮತ್ತು ರೀಸರ್ಚ್ ಅಸಿಸ್ಟೆಂಟ್ಸ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ದಿನಾಂಕ: 01-01-2014 ರಂದು ಅಥವಾ ನಂತರ ಕರ್ನಾಟಕ ಸ್ಟೇಟ್ ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು ಮತ್ತು ಅರ್ಜಿದಾರರ ವಯಸ್ಸು ಅರ್ಜಿ ಸಲ್ಲಿಸುವ ಕೊನೆಯ ದಿನದಂದು 30 ವರ್ಷಗಳನ್ನು ಮೀರಿರಬಾರದು. ಭರ್ತಿ ಮಾಡಿರುವ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 30ನೇ ಏಪ್ರಿಲ್ 2016.

ಸವಿಸ್ತಾರವಾದ ಅಧಿಸೂಚನೆಗೆ **www.karnatakajudiciary.kar.nic.in** ಗೆ ಭೇಟಿ ನೀಡಿ ಎಂದು ರಾಜ್ಯ ಉಚ್ಚ ನ್ಯಾಯಾಲಯದ ಮಹಾವಿಲೇಖನಾಧಿಕಾರಿಗಳಾದ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ತಿಳಿಸಿದ್ದಾರೆ,.

ಬಾಬು:ಜಿಪಿಆರ್

# HIGH COURT INVITED APPLICATION FOR 29 POSTS OF LAW CLERK-CUM-RESEARCH ASSISTANTS

Bengaluru, April 4 (Karnataka Information)

With a view to encourage brilliant and talented Law Graduates to join the Law Profession and to give them exposure to various facts of litigation and branches of law and familiarity with Court procedures, applications have been invited for appointment to 29 posts of Law Clerk-cum-Research Assistants from eligible candidates who possess Law Degree with minimum of 50% marks, enrolled as an advance with the Karnataka State Bar Council on or after 01-04-2014 and whose age a less than 30 years as on the last date of application.

The last date fixed for receipt of applications is 30th April 2016. For detailed notification visit www.karnatakajudiciary.kar.nic.in. According to Registrar general Jurisdiction John Michael Cunha.

babu:gpr

# ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚಿಸಲಾದ ತೋಟಗಾರಿಕೆ ಇಲಾಖೆಯಲ್ಲಿನ ಸಹಾಯಕ ತೋಟಗಾರಿಕೆ ನಿರ್ದೇಶಕರ 7 ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲ **"http://kpsc.kar.nic.in/Result"** ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಲು ಆಪೇಕ್ಷಿಸುವ ಅಭ್ಯರ್ಥಿಗಳು ಈ ಆಯ್ಕೆಪಟ್ಟಿಯನ್ನು ಪ್ರಕಟಿಸಿದ ದಿನಾಂಕದಿಂದ 07 ದಿನಗಳೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು- 560 001, ಇವರಿಗೆ ಸಲ್ಲಿಸಬಹುದೆಂದು ಈ ಮೂಲಕ ತಿಳಿಸಲಾಗಿದೆ. ನಿಗದಿತ ದಿನಾಂಕದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಬಾಬು:ಜಿಪಿಆರ್

# ರಾಷ್ಟ್ರ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಏಪ್ರಿಲ್ 6 ರಂದು ಬೆಳಗ್ಗೆ 10-30 ಗಂಟೆಗೆ ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಇತ್ತೀಚಿನ ಚಲನಚಿತ್ರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಂಡಿದೆ.

ಡಾ. ರಾಜ್‌ಕುಮಾರ್ ಅವರ ಸಮಗ್ರ ಚರಿತ್ರೆ ಗ್ರಂಥಕ್ಕೆ "ಸ್ವರ್ಣಕಮಲ ಪ್ರಶಸ್ತಿ ಪಡೆದ ದೊಡ್ಡಹುಲ್ಲೂರು ರುಕ್ಕೋಜಿ, ಶ್ರೇಷ್ಠ ಪ್ರಾದೇಶಿಕ ಚಿತ್ರ ಪ್ರಶಸ್ತಿ ಪಡೆದ "ತಿಥಿ" ಚಿತ್ರದ ನಿರ್ದೇಶಕ ರಾಮ್ ರೆಡ್ಡಿ, ಪದ್ಮಶ್ರೀ ಗಿರೀಶ್ ಕಾಸರವಳ್ಳಿ ಕುರಿತ ವ್ಯಕ್ತಿ ಚಿತ್ರಕ್ಕಾಗಿ ರಜತಕಮಲ ಪ್ರಶಸ್ತಿ ಪಡೆದ ನಿರ್ದೇಶಕ ಒ.ಪಿ. ಶ್ರೀವಾಸ್ತವ, ಡ್ರಿಬಲ್ಲಿಂಗ್ ವಿತ್ ದೇರ್ ಫ್ಯೂಚರ್ ಚಿತ್ರಕ್ಕಾಗಿ ರಜತ ಕಮಲ ಪ್ರಶಸ್ತಿ ಪಡೆದ ನಿರ್ದೇಶಕ ಜಾಕೋಬ್ ವರ್ಗೀಸ್ ಮತ್ತು ನಿರ್ಮಾಪಕರಾದ ಎನ್. ದಿನೇಶ್ ರಾಜಕುಮಾರ್ ಮತ್ತು ಮ್ಯಾಥ್ಯೂ ವರ್ಗೀಸ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಗುವುದು.

ಸಮಾರಂಭದಲ್ಲಿ ಹಿರಿಯ ಚಲನಚಿತ್ರ ಕಲಾವಿದರು ಹಾಗೂ ಶಾಸಕರಾದ ಡಾ. ಜಯಮಾಲಾ, ಶ್ರೀಮತಿ ತಾರಾ ಅನೂರಾಧಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು, ಹಿರಿಯ ಚಲನಚಿತ್ರ ನಿರ್ದೇಶಕರಾದ ಪದ್ಮಶ್ರೀ ಗಿರೀಶ್ ಕಾಸರವಳ್ಳಿ ಹಾಗೂ ಟಿ.ಎಸ್. ನಾಗಭರಣ ಅವರು ಪಾಲ್ಗೊಳ್ಳುವರು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರಸಿಂಗ್ ಬಾಬು ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸುವರು.

ಬಾಬು:ಪೂರ್ಣಿಮಾ:ಜಿಪಿಆರ್

## Preliminary Examination for Civil Judge Post

Bengaluru, April 4 (Karnataka Information)

The list of candidates who are eligible to take the Preliminary Examination for the post of Civil Judges pursuant to the Notification bearing No. CJRC 1/2016 dated 1/2-206 is available at www.karnatakajudiciary.kar.nic.in. The said candidates are hereby informed that the Preliminary Examination will be conducted between 2.30 PM. and 4.30 PM on Friday the 6th May 2016 at Bengaluru. The Admission Cards to the eligible candidates will be available at the above said website shortly according to Registrar general Jurisdiction John Michael Cunha.

babu:gpr

## ಜಗಜೀವನರಾಮ್ ಪ್ರಶಸ್ತಿ: ಎಂ. ಜಯಣ್ಣ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

ಚಿತ್ರದುರ್ಗ ಜಿಲ್ಲೆಯ ಎಂ. ಜಯಣ್ಣ ಅವರನ್ನು ಈ ಬಾರಿಯ ಮಾಜಿ ಉಪ ಪ್ರಧಾನಿ ದಿವಂಗತ ಡಾ: ಬಾಬು ಜಗಜೀವನರಾಮ್ ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ಆಯ್ಕೆ ಸಮಿತಿಯು

ಆಯ್ಕೆ ಮಾಡಿದೆ ಎಂದು ರಾಜ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಆಂಜನೇಯ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ.

ಪ್ರಶಸ್ತಿ ವಿಜೇತ ಎಂ. ಜಯಣ್ಣ ಅವರ ಪರಿಚಯ ವಿವರ ಇಂತಿದೆ.

**ಶ್ರೀ ಎಂ.ಜಯಣ್ಣ**



ಶ್ರೀ ಎಂ.ಜಯಣ್ಣ ರವರು ದಿನಾಂಕ:03-06-1950 ರಂದು ಅಗಸನ ಕಲ್ಲು, ಚಿತ್ರದುರ್ಗ ಇಲ್ಲಿ ಜನ್ಮ ತಾಳಿದ್ದು, ಇವರ ತಂದೆ ಶ್ರೀ ಮಾರಪ್ಪ ಹಾಗೂ ತಾಯಿ ಶ್ರೀಮತಿ ಹನುಮಕ್ಕ ರವರಾಗಿದ್ದು, ಇವರು ಪರಿಶಿಷ್ಟ ಜಾತಿಗೆ ಸೇರಿದ ಆದಿ ಕರ್ನಾಟಕಕ್ಕೆ ಸೇರಿದವರಾಗಿರುತ್ತಾರೆ. ಇವರ ಶಿಕ್ಷಣ ಚಿತ್ರದುರ್ಗದಲ್ಲಿ ನಡೆಸಿದ್ದು, ಸಮಾಜ ಸೇವಕರಾಗಿ, ದಲಿತ ಸಂಘರ್ಷ ಸಮಿತಿಯ ಮುಖಂಡರಾಗಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದ್ದು, ಇವರಿಗೆ ಡಾ:ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ, ಶೂನ್ಯ ಪೀಠ ಪ್ರಶಸ್ತಿ ಹಾಗೂ ಭಾವೈಕ್ಯತಾ ಪ್ರಶಸ್ತಿ ಲಭಿಸಿದೆ.

ಎಂ.ಜಯಣ್ಣ ಆದ ಇವರು ಕರ್ನಾಟಕ ಚಳುವಳಿ, ಹೋರಾಟ ಮತ್ತು ಜನಪರ ಕಾರ್ಯಕ್ರಮಗಳನ್ನು ಕಳೆದ 40 ವರ್ಷಗಳಿಂದ ಸಂಘಟಿಸಿ ನೊಂದವರ ಧ್ವನಿಯಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯನ್ನು ತಳಮಟ್ಟದಿಂದ ರೂಪಿಸಿದವರಲ್ಲಿ, ಬೆಳೆಸಿದವರಲ್ಲಿ ಪ್ರಮುಖವಾಗಿ ಕೆಲಸ ಮಾಡಿದ್ದಾರೆ. ಎಂ.ಜಯಣ್ಣ ಎಂದರೆ ಡಿ.ಎಸ್.ಎಸ್. ಎಂ.ಜಯಣ್ಣ ಎಂದೇ ಜನತೆಯಲ್ಲಿ ಪರಿಚಿತರಾಗಿದ್ದಾರೆ.

ದಲಿತರ, ಬಡವರ, ಕಣ್ಣೀರು ಅವರ ಶೋಷಣೆ ಇವರ ಗಮನ ಸೆಳೆದಿದ್ದವು. ಅಸಮಾನತೆ ಅಸ್ಪೃಶ್ಯತೆಗಳಿಂದಾಗಿ ಅವಮಾನಿತರಾಗುತ್ತಿದ್ದ ದಲಿತರ ಸ್ಥಿತಿಗತಿ ಅವರ ಅಮಾನವೀಯವಾದ ಬದುಕು ಅವರನ್ನು ಸಾರ್ವಜನಿಕ ಸೇವೆಗೆ ತೊಡಗಿಸಿಕೊಳ್ಳಲು ಪ್ರೇರೇಪಿಸಿದವು.

ಚಿತ್ರದುರ್ಗ ನಗರಸಭೆಯಿಂದ ಅಲ್ಲಿನ ಪೌರಕಾರ್ಮಿಕರಿಗೆ ಆಗುತ್ತಿದ್ದ ಅನ್ಯಾಯ ಮತ್ತು ಶೋಷಣೆಯನ್ನು ಕಂಡು ಪ್ರತಿಭಟಿಸಿದರು. ಮತ್ತು ಅವರ ಪರ ಹೋರಾಡಿರುತ್ತಾರೆ.

**ಇವರ ಪ್ರಮುಖ ಹೋರಾಟಗಳು:-**

1) ರಾಜ್ಯ ಮಟ್ಟದಲ್ಲಿ ಒಳ ಮೀಸಲಾತಿಗೆ ಹೋರಾಟ.
2) ಪರಿಶಿಷ್ಟ ಜಾತಿ/ವರ್ಗಗಳ ಸರ್ಕಾರಿ ನೌಕರರ ಮುಂಬಡ್ತಿಗಾಗಿ ಹೋರಾಟ.
3) ಕಂಬಾಲಪಲ್ಲಿಯಲ್ಲಿ ನಡೆದ ಸಾಮೂಹಿಕ ಹತ್ಯೆಯನ್ನು ವಿರೋಧಿಸಿ ರ್‍ಯಾಲಿ ನಡೆಸಿರುತ್ತಾರೆ.
4) ಭದ್ರ ಮೇಲ್ದಂಡೆ ನೀರಾವರಿ ಯೋಜನೆ ಹೋರಾಟ
5) ಚಿತ್ರದುರ್ಗ ಜಿಲ್ಲೆಯ ಹೀರೇಗುಂಟನೂರು ವ್ಯಾಪ್ತಿಯ ತಿರುಂಪುರ ಗ್ರಾಮದ ದಲಿತರಿಗೆ ಜಮೀನು ಹಂಚಿಕೆಗೆ ನ್ಯಾಯಯುತವಾದ ಹೋರಾಟ.
6) ಹೆಂಡ ಬೇಡ: ಹೋಬಳಿಗೊಂದು ವಸತಿ ಶಾಲೆ ನೀಡಿ ಎಂದು ರಾಜ್ಯ ಮಟ್ಟದ ಹೋರಾಟ.
7) 1981 ರಲ್ಲಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಭೂ ಚಳುವಳಿ ಕೈಗೊಂಡು ದಲಿತರಿಗೆ ಭೂ ಸಾಗುವಳಿ ಚೀಟಿ ವಿತರಣೆ.
8) ಚಿತ್ರದುರ್ಗ ತಾಲ್ಲೂಕಿನ ವಿಜಾಪುರ ಗ್ರಾಮದಲ್ಲಿ ದಲಿತರ ಐದು ಎಕರೆ ಜಮೀನನ್ನು ಸವರ್ಣೀಯರು ಆಕ್ರಮಿಸಿಕೊಂಡಿದ್ದ ಎಸ್.ಸಿ.ಪಿ.ಟಿ.ಎಲ್ ವಿರುದ್ದ ದಲಿತ ಯುವ ಜನತೆಯನ್ನು, ಮಹಿಳೆಯರನ್ನು ಸಂಘಟಿಸಿ ಹೋರಾಟ ನಡೆಸಿ ಭೂಮಿಯನ್ನು ದಲಿತರಿಗೆ ಹಿಂದಿರುಗಿಸಿರುವುದು.
9) ಕಲ್ಕುಂಟೆ ಗ್ರಾಮದಲ್ಲಿ ಅತಿಕ್ರಮಗೊಂಡಿದ್ದ ಜಮೀನುಗಳನ್ನು ದಲಿತರಿಗೆ ಹಿಂದಿರುಗಿಸಿರುವುದು.
10) ಕಡಬನಕಟ್ಟೆ ಭೂ ಹೋರಾಟದ ಪ್ರಯುಕ್ತ ಕಾಲ್ನಡಿಗೆ ಜಾಥಾ ನಡೆಸಿರುವುದು.
11) ಚಳ್ಳಕೆರೆ ತಾಲ್ಲೂಕಿನಲ್ಲಿ ದಲಿತರ ಬಹಿಷ್ಕಾರ ವಿರೋಧಿಸಿ ಹೋರಾಟ
12) ಡಾ:ಬಿ.ಆರ್. ಅಂಬೇಡ್ಕರ್ ರವರು 1927 ಮಾರ್ಚ್ 19, 20 ರಲ್ಲಿ ನಡೆಸಿದ ಮಹಾಡ್ ಸತ್ಯಾಗ್ರಹದ ನೆನಪಿಗಾಗಿ ಚಿತ್ರದುರ್ಗದಲ್ಲಿ ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮವನ್ನು ಸಂಘಟಿಸಿರುವುದು.
13) ಜಿಲ್ಲೆಯಾದ್ಯಂತ ದಲಿತ ವಿದ್ಯಾರ್ಥಿಗಾಗಿ, ಶೋಷಿತ ದಲಿತರಿಗಾಗಿ ನೂರಾರು ಅಧ್ಯಯನ ಶಿಬಿರಗಳನ್ನು ರೂಪಿಸಿರುವುದು
14) ದಲಿತರ ಸಮಸ್ಯೆಗಳು, ಹೋರಾಟ ಮತ್ತು ದಾರಿಗಳು ಕುರಿತು ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಹಾಗೂ ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣಗಳನ್ನು ರೂಪಿಸಿರುವುದು.
15) ಗ್ರಾಮೀಣ ಬ್ಯಾಂಕ್ ನಿರ್ದೇಶಕರಾಗಿದ್ದಾಗ ಅನೇಕ ಬಡವರಿಗೆ ಉಚಿತ ಉದ್ಯೋಗಗಳನ್ನು ಕೊಡಿಸಿರುವುದು.
16) ಚಿತ್ರದುರ್ಗದಲ್ಲಿ ವಸತಿ ಹೀನ ಕೊಳಚೆ ಪ್ರದೇಶದ ಜನರನ್ನು ಸಂಘಟಿಸಿ ಹೋರಾಟ ರೂಪಿಸಿ ನಿವೇಶನಗಳನ್ನು ಕೊಡಿಸಿರುವುದು.

17) ಚಿತ್ರದುರ್ಗದಲ್ಲಿ ಕೋಮು ಗಲಭೆ ನಡೆದಂತಹ ಸಂದರ್ಭದಲ್ಲಿ ಹಿಂದು ಮುಸ್ಲಿಂ ಬಾಂಧವ್ಯ ಬೆಸೆಯುವಲ್ಲಿ ಮುಸ್ಲಿಂ - ಹಿಂದೂ ಸಂಘಟನೆಗಳೊಂದಿಗೆ ಅವಿತರವಾಗಿ ದುಡಿದಿರುವುದು.

18) ದಲಿತ ಸಂಘರ್ಷ ಸಮಿತಿಯ ಬೆಳವಣಿಗೆ ಹಾಗೂ ಅದರ ಬಲವರ್ಧನೆಗಾಗಿ ರಾಜ್ಯ ಮಟ್ಟದ ಪುನಶ್ಚೇತನ ರ್‍ಯಾಲಿಯನ್ನು 1998 ರಲ್ಲಿ ಸಂಘಟಿಸಿರುವುದು.

19) ಇವರು ಕೇವಲ ದಲಿತರ ಸಮಸ್ಯೆಗಳಿಗಷ್ಟೇ ಸ್ಪಂದಿಸದೇ, ಎಲ್ಲಾ ಜಾತಿಯ ಸಮುದಾಯದ ಬಡ ಜನರ ಸಂಕಷ್ಟಗಳಿಗೂ ಸ್ಪಂದಿಸುತ್ತಾ ಬಂದಿರುತ್ತಾರೆ.

ಪ್ರಜಾಪ್ರಭುತ್ವದ ನಿಲುವು, ಪ್ರಾಮಾಣಿಕತೆ, ಪಾರದರ್ಶಕತೆಗಳು ಇವರ ಗುಣಗಳಾಗಿವೆ ಎಂದರೆ ಉತ್ಪ್ರೇಕ್ಷೆಯಲ್ಲ. ಇವರ ಎಲ್ಲಾ ಮೌಲ್ಯಗಳೂ ಆಗಿವೆ, ಇವರ ಹೋರಾಟದ ಜೀವನದುದ್ದಕ್ಕೂ ಈ ಮೌಲ್ಯಗಳನ್ನೇ ಪ್ರತಿಪಾದಿಸಿದ್ದಾರೆ.

ಬಾಬು/ಕೆವಿ/ಕೆಎಂ